/c

## ಕರ್ನಾಟಕ ವಿಧಾನ ಪರಿಷತ್ತು

### (ಶೂನ್ಯ ವೇಳೆ ಪ್ರಸ್ತಾಪ)

ವಿಷಯ: ಶ್ರೀ ಶ್ರೀಮತಿ ಹೇಮಲತಾ ನಾಯಕ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ದಿನಾಂಕ 11-12-2023 ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.

- ಪ್ರಸಕ್ತ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕ ಪ್ರವೇಶಿಸುತ್ತಿದ್ದೇವೆ ಆದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆ.ಎಸ್.ಎಂ.ಎಸ್.ಸಿಎಲ್) ಔಷಧಗಳನ್ನು ಖರೀದಿಸಿ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಿಲ್ಲ. ಇದರಿಂದಾಗಿ ಹಾವು, ನಾಯಿ ಕಡಿತದಂತ ಚಿಕಿತ್ಸೆಗಳು ಮಾತ್ರವಲ್ಲದೆ ಕ್ಯಾನ್ಸರ್, ಹೃದಯಾಘಾತ ಮೊದಲಾದ ಗಂಭೀರ ಕಾಯಿಲೆಗಳಿಗೆ ಬಳಸುವ ಜೀವ ರಕ್ಷಕ ಔಷಧಗಳು ಸಿಗದೇ ಬಡ ರೋಗಿಗಳು ಪರದಾಡುವಂತಾಗಿದೆ.

- ಔಷಧ ಪೂರೈಕೆ ಟೆಂಡರ್ ಪ್ರಕ್ರಿಯೆಯನ್ನು ಇನ್ನೂ ಮುಗಿಸದೆ ಇರುವುದೇ ಇದಕ್ಕೆ ಕಾರಣ ಬಡ ರೋಗಿಗಳು ವೈದ್ಯರು ಬರೆದುಕೊಡುವ ಔಧಗಳನ್ನು ಹೊರಗಡೆ ದುಬಾರಿ ಬೆಲೆ ತೆತ್ತು ಖರೀದಿಸಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ನವಂಬರ್ ಕೊನೆಯವರೆಗೆ ಬರೋಬ್ಬರಿ 800 ಕೋಟಿ ರೂ. ಮೊತ್ತದ 733 ಔಷಧಗಳಿಗೆ ಬೇಡಿಕೆ ಬಂದಿದೆ.

- ಕೆ.ಎಸ್.ಎಂ.ಎಸ್.ಸಿಎಲ್ ಪ್ರತಿವರ್ಷ ನೂರಾರು ಕೋಟಿ ರೂ ಮೌಲ್ಯದ ಬ್ಯಾಂಡೇಜಕ್ ಕ್ಲಾತ್, ಕಾಟನ್, ಸರ್ಜಿಕಲ್ ಗ್ಲಾಸ್, ಗ್ಲುಕೋಸ್ ಬಾಟಲ್, ಆಂಟಿಬಯೋಟಿಕ್ ಮಾತ್ರೆ ಮತ್ತು ವೈದ್ಯಕೀಯ ಸಲಕರಣೆ ಸೇರಿ ನಾನಾ ಔಷಧಗಳನ್ನು ಖರೀದಿಸಿ ಜಿಲ್ಲಾ ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಗರ ಆರೋಗ್ಯ ಕೇಂದ್ರಗಳಿಗೆ ಉಚಿತವಾಗಿ ಪೂರೈಸುವ ಕಾಯ ಮಾಡುತ್ತಿದೆ. ಆದ್ದರಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-

ಕರ್ನಾಟಕ ರಾಜ್ಯದ ಸರ್ಕಾರಿ ಆರೋಗ್ಯ ಕೇಂದ್ರಗಳು ಸಂಸ್ಥೆಗೆ ಅವಶ್ಯವಿರುವ ಔಷಧಿಗಳ ವಾರ್ಷಿಕ ಬೇಡಿಕೆ ಪಟ್ಟಿಯನ್ನು E-AUSHADA ತಂತ್ರಾಂಶದ ಮುಖಾಂತರ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (KSMSCL) ಸಂಸ್ಥೆಗೆ ಸಲ್ಲಿಸಲಾಗುತ್ತಿದೆ. KSMSCL ಸಂಸ್ಥೆಯವರು ಟೆಂಡರ್‌ಮುಖಾಂತರ ಔಷಧಿಗಳನ್ನು ಸಂಗ್ರಹಿಸಿ ಜಿಲ್ಲಾವಾರು KSMSCL ಔಷಧ ಉಗ್ರಾಣಗಳಿಗೆ ಸರಬರಾಜು ಮಾಡಲಾಗುತ್ತಿದೆ.

Scanned with OKEN Scanner

ಜಿಲ್ಲಾ KSMSCL ಔಷಧ ಉಗ್ರಾಣಗಳಿಂದ ಸಂಸ್ಥೆವಾರು ಬೇಡಿಕೆಯ ಅನ್ವಯ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಅಗತ್ಯ ಹಾಗೂ ಅವಶ್ಯವಿರುವ ಡ್ರಗ್ ಲಿಸ್ಟ್ ಪ್ರಕಾರ 733 ಔಷಧಿಗಳನ್ನು ಸರಬರಾಜು ಮಾಡಲು ಕಳೆದ 6 ತಿಂಗಳಲ್ಲಿ ಒಟ್ಟು 36 ಟೆಂಡರ್‌ಗಳನ್ನು KSMSCL ವತಿಯಿಂದ ಕರೆಯಲಾಗಿರುತ್ತದೆ.

ರೂ. 629.90 ಕೋಟಿ ಮೊತ್ತದ 36 ಟೆಂಡರ್ ಗಳನ್ನು ಕರೆಯಲಾಗಿದೆ. ಒಟ್ಟು 30 ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿರುತ್ತದೆ. ಉಳಿದ 6 ಟೆಂಡರ್ ಗಳಪ್ರಕ್ರಿಯೆಚಾಲ್ತಿಯಲ್ಲಿರುತ್ತದೆ. ಪ್ರಕ್ರಿಯೆ ಚಾಲ್ತಿಯಲ್ಲಿದ್ದು ದಿನಾಂಕ 31-12-2023 ರೊಳಗೆ ಪೂರ್ಣಗೊಳ್ಳಲಿದೆ.

KSMSCL ಸಂಸ್ಥೆಯ ಔಷಧ ಉಗ್ರಾಣಗಳಲ್ಲಿ ಲಭ್ಯವಿರುವ ಔಷಧಿಗಳ ಪಟ್ಟಿಯನ್ನು ಎಲ್ಲಾ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸಾರ್ವಜನಿಕ ಆರೋಗ್ಯ ಕೇಂದ್ರಗಳು ತಮಗೆ ಅವಶ್ಯವಿರುವ ಔಷಧಿಗಳನ್ನು ಜಿಲ್ಲಾವಾರು KSMSCL ಔಷಧ ಉಗ್ರಾಣಗಳಿಗೆ ಬೇಡಿಕೆ ಸಲ್ಲಿಸಿ ಔಷಧಿಗಳನ್ನು ಪಡೆಯಬಹುದಾಗಿದೆ.

ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಕೊರತೆ ಇದ್ದಲ್ಲಿ ಔಷಧಿಗಳನ್ನು ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ (NFDS) ಅಡಿಯಲ್ಲಿ ಲಭ್ಯವಿರುವ ಅನುದಾನ, ABArK ಅನುದಾನ ಹಾಗೂ ARS ಇತರೆ ಅನುದಾನದಲ್ಲಿ ನಿಯಮಾನುಸಾರ ಸ್ಥಳೀಯವಾಗಿ ಖರೀದಿಸಿ ಫಲಾನುಭವಿಗಳಿಗೆ ನೀಡುವಂತೆ ಸೂಚಿಸಲಾಗಿರುತ್ತದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ (NFDS) ಅಡಿಯಲ್ಲಿ ಆರ್ಥಿಕ ಸಾಲು-2023-24 ರಲ್ಲಿ ಆರೋಗ್ಯ ಸಂಸ್ಥೆವಾರು ಈ ಕೆಳಕಂಡಂತೆ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

| ಕ್ರಮ ಸಂಖ್ಯೆ | ಸಂಸ್ಥೆಯ ಹೆಸರು | ಪ್ರತಿ ಸಂಸ್ಥೆವಾರು ವಾರ್ಷಿಕ ಅನುದಾನ ಹಂಚಿಕೆ ರೂ. ಗಳಲ್ಲಿ |
|---|---|---|
| 1 | ಉಪಕೇಂದ್ರ | 17,595 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ | 61,697 |
| 3 | ಸಮುದಾಯ ಆರೋಗ್ಯ ಕೇಂದ್ರ | 72,705 |
| 4 | ತಾಲ್ಲೂಕ ಆಸ್ಪತ್ರೆ | 1,98,560 |
| 5 | ಜಿಲ್ಲಾ ಆಸ್ಪತ್ರೆ | 3,92,727 |

Scanned with OKEN Scanner

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಉಚಿತ ಔಷಧಿ ಸೇವೆಗಳ ಕಾರ್ಯಕ್ರಮದ ಅಡಿಯಲ್ಲಿ ಆರ್ಥಿಕ ಸಾಲು-2023-24 ರಲ್ಲಿ ಒಟ್ಟು ರೂ. 3103.80 ಲಕ್ಷಗಳ ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಈಗಾಗಲೇ ರಾಜ್ಯದಲ್ಲಿ ರೂ. 1907.50 ಲಕ್ಷಗಳ ಅನುದಾನವನ್ನು ಔಷಧಿಗಳನ್ನು ಸ್ಥಳೀಯವಾಗಿ ಖರೀದಿಸಿ ಫಲಾನುಭವಿಗಳಿಗೆ ನೀಡುವ ಸಲುವಾಗಿ ವೆಚ್ಚ ಮಾಡಲಾಗಿರುತ್ತದೆ.

ಆರೋಗ್ಯ ಕೇಂದ್ರಗಳಲ್ಲಿ ಅವಶ್ಯಕ ಔಷಧಿಗಳನ್ನು ಸ್ಥಳೀಯವಾಗಿ ಖರೀದಿ ಮಾಡಲು ABArK ನಿಧಿಯಲ್ಲೂ ಕೂಡ ಈ ಕೆಳಕಂಡಂತೆ ಅನುದಾನ ಲಭ್ಯವಿರುತ್ತದೆ. (27-11-2023 ರಲ್ಲಿರುವ ಮಾಹಿತಿಯಂತೆ)

**Outstanding amount available in PHIs under AB-ArK scheme-Canara Bank Account (As on 27th Nov-2023)**

| Sl. No. | Type of facility | Number of facilities | Gross Amount (in lakhs) |
|---|---|---|---|
| 1. | District Hospitals/District Level Hospitals | 25 | 4,161.67 |
| 2. | Taluk Hospitals | 147 | 7,335.62 |
| 3. | CHC | 214 | 3,640.75 |
| 4. | PHC | 2,484 | 5,293.64 |
| 5. | MCH/Maternity Hospital | 31 | 164.16 |
| | **GOVERNMENT INSTITUTIONS** | **2,901** | **20,595.83** |

ಪ್ರಾಣಿ ಕಡಿತಕ್ಕೊಳಗಾದವರಿಗೆ ರೇಬಿಸ್ ಚಿಕಿತ್ಸೆಗಾಗಿ ಆಂಟಿ ರೇಬಿಸ್ ವ್ಯಾಕ್ಸಿನ್ (ARV) ಮತ್ತು ರೇಬಿಸ್ ಇಮ್ಯೂನೋಗ್ಲಾಬಿಲಿನ್ ಲಸಿಕೆಗಳನ್ನು (RIG) ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ದಾಸ್ತಾನು ಲಭ್ಯವಿರುವಂತೆ ಹಾಗೂ ಪ್ರಾಣಿ ಕಡಿತದ ಯಾವುದೇ ಸಂತ್ರಸ್ತರಿಗೆ ಚಿಕಿತ್ಸೆಯನ್ನು ನಿರಾಕರಿಸದೇ ಉಚಿತವಾಗಿ ARV ಮತ್ತು RIG ಯನ್ನು ಒದಗಿಸಲು ಸೂಚಿಸಿ ಸುತ್ತೋಲೆ ಹೊರಡಿಸಲಾಗಿರುತ್ತದೆ (ಅನುಬಂಧ-1). ಅದೇ ರೀತಿಯಲ್ಲಿ ರಾಜ್ಯದಲ್ಲಿ ಹಾವು ಕಡಿತ ನಿರ್ವಹಣೆ ಹಾಗೂ ಚಿಕಿತ್ಸೆಗಾಗಿ ASV ಲಸಿಕೆಗಳನ್ನು ಸಾಕಷ್ಟು ದಾಸ್ತಾನು ಇರುವಂತೆ ಹಾಗೂ ಹಾವು ಕಡಿತದ ಯಾವುದೇ ಸಂತ್ರಸ್ತರಿಗೆ ಚಿಕಿತ್ಸೆಯನ್ನು ನಿರಾಕರಿಸದೇ ASV ಯನ್ನು ಉಚಿತವಾಗಿ ನೀಡಲು ಸುತ್ತೋಲೆ ಹೊರಡಿಸಲಾಗಿದೆ (ಅನುಬಂಧ-2).

Scanned with OKEN Scanner

ಮುಂದುವರೆದು, ವೈದ್ಯಾಧಿಕಾರಿಗಳು ಖಾಸಗಿ ಮೆಡಿಕಲ್ಸ್‌ಗಳಿಗೆ ಔಷಧಿಗಳ ಚೀಟಿಯನ್ನು ನೀಡದಂತೆ ಸೂಚಿಸಲಾಗಿದೆ. ಯಾವುದೇ ವೈದ್ಯಾಧಿಕಾರಿಗಳು ಈ ರೀತಿ ಮಾಡಿದ್ದಲ್ಲಿ, ಅವರ ವಿರುದ್ಧ ಕ್ರಮ ಜರುಗಿಸಲಾಗುವುದು.

ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ ಔಷಧಗಳ ಸರಬರಾಜಿಗಾಗಿ ಆಹ್ವಾನಿಸಿದ ಟೆಂಡರ್ ಪ್ರಕ್ರಿಯೆಗಳು ಚಾಲ್ತಿಯಲ್ಲಿರುತ್ತದೆ. ಈಗಾಗಲೇ 226 ಔಷಧಗಳ ಸರಬರಾಜಿಗಾಗಿ Notification of Award ಗಳನ್ನುನೀಡಲಾಗಿದ್ದುಸರಬರಾಜು ಚಾಲ್ತಿಯಲ್ಲಿರುತ್ತದೆ.

362 ಔಷಧಗಳು ಟೆಂಡರ್ ಅಂಗೀಕಾರ ಹಂತದಲ್ಲಿದ್ದು, ಶೀಘ್ರದಲ್ಲಿ Notification of Award ಗಳನ್ನು ನೀಡಲಾಗುವುದು ಹಾಗೂ ಸರಬರಾಜನ್ನು ಜನವರಿ-2024 ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಉಳಿದ ಔಷಧಿಗಳಿಗಾಗಿ ಮರು ಟೆಂಡರ್ ಆಹ್ವಾನಿಸಿ, ಸರಬರಾಜು ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

**ಆಕುಕ 03 ಶೂನ್ಯವೇಳೆ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner

ಅನುಬಂಧ-1

# ಆಯುಕ್ತಾಲಯ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
5 ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು -23

ಸಂ: ಸಿ ಎಂ ಡಿ/ ಇಎಸ್ ಟಿ/77ಎ/2022-23; E- 1191346 ದಿನಾಂಕ: 05-10-2023

## ಸುತ್ತೋಲೆ

ವಿಷಯ: ಪ್ರಾಣಿ ಕಡಿತಕ್ಕೊಳಗಾದವರಿಗೆ ರೇಬಿಸ್ ಚಿಕಿತ್ಸೆಗಾಗಿ ಆಂಟಿ ರೇಬಿಸ್ ವ್ಯಾಕ್ಸಿನ್ (ARV) ಮತ್ತು ರೇಬಿಸ್ ಇಮ್ಯೂನೊಗ್ಲಾಬಿಲಿನ್ ಲಸಿಕೆಗಳನ್ನು (RIG) ಉಚಿತವಾಗಿ ನೀಡುವ ಬಗ್ಗೆ -

ಉಲ್ಲೇಖ: ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯಿದೆ, 2020; ವಿಭಾಗ 3

>><<>><<>><<>><<

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರೇಬೀಸ್ ಒಂದು ಮಾರಣಾಂತಿಕ ಕಾಯಿಲೆಯಾಗಿದ್ದರೂ ಸಮಯೋಚಿತ ಹಾಗೂ ಸೂಕ್ತ ಚಿಕಿತ್ಸೆಯಿಂದ ಪ್ರಾಣವನ್ನು ಉಳಿಸಬಹುದು. **"2030ರ ವೇಳೆಗೆ ನಾಯಿಕಡಿತದಿಂದ ಬರುವ ರೇಬೀಸ್ ನ ನಿರ್ಮೂಲನೆ"** ಮಾಡುವುದು ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮದ ಧ್ಯೇಯವಾಗಿದೆ. ಕರ್ನಾಟಕದಲ್ಲಿ ರೇಬೀಸ್ ನ್ನು ಒಂದು **Notifiable Disease** ಎಂದು ದಿನಾಂಕ 05-12-2022 ರಿಂದಲೇ ಘೋಷಿಸಲಾಗಿದೆ. ಈ ನಿಟ್ಟಿನಲ್ಲಿ, ಮಾರಣಾಂತಿಕ ರೇಬೀಸ್ ಕಾಯಿಲೆಯಿಂದ ಜೀವರಕ್ಷಿಸಬಲ್ಲ ಔಷಧಿಗಳಾದ ಆಂಟಿ ರೇಬಿಸ್ ವ್ಯಾಕ್ಸಿನ್ (ARV) ಮತ್ತು ರೇಬಿಸ್ ಇಮ್ಯೂನೊಗ್ಲಾಬಿಲಿನ್ (RIG) ಗಳನ್ನು KSMSCL ನ ವಾರ್ಷಿಕ ಇಂಡೆಂಟ್ ಪೂರೈಕೆಯ ಒಂದು ಭಾಗವನ್ನಾಗಿಸಿದ್ದು, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ದಾಸ್ತಾನು ಲಭ್ಯವಿರುವಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ಎಪಿಎಲ್/ಬಿಪಿಎಲ್ ಕಾರ್ಡ್ ಹೊಂದಿರುವ ಬಗ್ಗೆ ಪರಿಗಣಿಸದೇ ಪ್ರಾಣಿ ಕಡಿತದ ಯಾವುದೇ ಸಂತ್ರಸ್ತರಿಗೆ ಚಿಕಿತ್ಸೆಯನ್ನು ನಿರಾಕರಿಸದೇ, ಎಲ್ಲಾ ಪ್ರಾಣಿ ಕಡಿತ ಪ್ರಕರಣಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಉಚಿತ ARV ಮತ್ತು RIG ಅನ್ನು ಒದಗಿಸಲು ಈ ಮೂಲಕ ನಿರ್ದೇಶಿಸಲಾಗಿದೆ. RIG ಅನ್ನು ವಿವೇಚನೆಯಿಂದ ಬಳಸಲು "ರೇಬೀಸ್ ರೋಗನಿರೋಧಕ ಮಾರ್ಗಸೂಚಿಗಳು" ಎಂಬ ಶೀರ್ಷಿಕೆಯಡಿಯಲ್ಲಿ ಈ ಕೆಳಗಿನ ಲಿಂಕ್ ನಲ್ಲಿ ಲಭ್ಯವಿರುವ NRCP ಶಿಫಾರಸ್ಸಿನಂತೆ ಕ್ರಮ ಕೈಗೊಳ್ಳಲು ವೈದ್ಯಕೀಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

https://ncdc.gov.in/WriteReadData/linkimages/GuidelinesforRabiesProphylaxis.pdf

5.10.23

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**
**ಆರೋಗ್ಯ ಸೌಧ, ಬೆಂಗಳೂರು**

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
2. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು
3. ಮುಖ್ಯ ಆರೋಗ್ಯ ಅಧಿಕಾರಿಗಳು, ಬಿಬಿಎಂಪಿ, ಬೆಂಗಳೂರು
4. ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು
5. ಎಲ್ಲಾ ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳು

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು
2. ವಿಶೇಷ ಆಯುಕ್ತರು-ಬಿಬಿಎಂಪಿ ಬೆಂಗಳೂರು

ಅನುಬಂಧ - 2.

ಸಾಗರ

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇ ಮೇಲ್ com-hfws@karnataka.gov.in ದೂರವಾಣಿ +918023354039, 918023354085

CMD/EST/SB-Notifiable/25/2023-24 ದಿನಾಂಕ:-08-12-2023

# ಸುತ್ತೋಲೆ

**ವಿಷಯ:- ಕರ್ನಾಟಕ ರಾಜ್ಯದಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣದ ಬಗ್ಗೆ**

**ಉಲ್ಲೇಖ:-** 1. ಆಯುಕ್ತಾಲಯದ ಸುತ್ತೋಲೆ ಸಂಖ್ಯೆ: - PD/IDSP/Snakebite/48/2022-2023 ದಿನಾಂಕ 17.04.2023

2. ಡಾ. ಅತುಲ್ ಗೋಯಲ್, ಸ್ವಾಸ್ತ ಸೇವೆಗಳ ಮಹಾ ನಿರ್ದೇಶಕರು ಭಾರತ ಸರ್ಕಾರ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ISCP/57155/06/2022/DZDP/NCDC ದಿನಾಂಕ 19.10.2022

3. ಶ್ರೀ ಲವ್ ಅಗರ್ವಾಲ್, ಭಾಆಸೇ, ಇವರ ಅರೆ ಸರ್ಕಾರಿ ಪತ್ರ ಸಂ:ISCP/57155/06/ 2022/DZDP/NCDC ದಿನಾಂಕ 20.10.2022

.......

ಪ್ರಪಂಚದಲ್ಲಿ 2000 ಹಾವಿನ ಪ್ರಭೇದಗಳಿದ್ದು ಅದರಲ್ಲಿ 300 ಪ್ರಭೇದದ ಹಾವುಗಳು ಭಾರತದಲ್ಲಿದ್ದು, ಅವುಗಳಲ್ಲಿ 52 ಪ್ರಭೇದಗಳು ವಿಷಪೂರಿತವಾಗಿರುತ್ತದೆ. ಹಾವು ಕಡಿತದ ಪ್ರಕರಣಗಳು ತಿವ್ರ ಜೀವ ಭಯ ಮತ್ತು ಸಾವಿನ ಮಿತಿಯನ್ನು ಕಡಿತಗೊಳಿಸುವ ತುರ್ತು ವೈದ್ಯಕೀಯ ಸೇವೆಯಾಗಿರುತ್ತದೆ. ಈ ಪರಿಸ್ಥಿತಿಯನ್ನು ಸೂಕ್ತ ಸಮಯದಲ್ಲಿ ಉಪಚರಿಸುವುದರಿಂದ ನಿಭಾಯಿಸಬಹುದು ಮತ್ತು ಗುಣಪಡಿಸಬಹುದಾಗಿರುತ್ತದೆ. ಉಷ್ಣವಲಯ ಮತ್ತು ಶೀತವಲಯಗಳಲ್ಲಿ ಹಾಗೂ ಅತೀ ಹೆಚ್ಚು ಮಳೆ ಮತ್ತು ಅತಿ ಉಷ್ಣಾಂಶವಿರುವ ಗ್ರಾಮೀಣ ಪ್ರದೇಶಗಳಲ್ಲಿ ಹಾವು ಕಡಿತ ಪ್ರಕರಣಗಳು ವರದಿಯಾಗುತ್ತಿದ್ದು, ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿರುತ್ತದೆ.

ಭಾರತ ಸರ್ಕಾರದ ವತಿಯಿಂದ ಹಾವು ಕಡಿತ ನಿಯಂತ್ರಣ ಕಾರ್ಯಕ್ರಮ ಪ್ರಾರಂಭವಾಗಿದ್ದು, ನಿರ್ಲಕ್ಷಿತ ಉಷ್ಣವಲಯದ ಖಾಯಿಲೆಗಳ (Neglected Tropical Diseases) ಮೇಲೆ ಕೇಂದ್ರಿಕರಿಸಿ ಸ್ಥಿರ ಅಭಿವೃದ್ಧಿ ಗುರಿ (SDG) ಸಾಧಿಸುವುದು ಮುಖ್ಯ ಧ್ಯೇಯವಾಗಿರುತ್ತದೆ. ಆರೋಗ್ಯ ಸೇವೆಗಳನ್ನು ನೀಡುತ್ತಿರುವ ಎಲ್ಲಾ ಸಂಸ್ಥೆಗಳಲ್ಲಿಯೂ ಹಾವು ಕಡಿತದ ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಐಡಿಎಸ್‌ಪಿ ಕಾರ್ಯಕ್ರಮದಡಿಯಲ್ಲಿ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ IHIP ಜಾಲತಾಣದಲ್ಲಿ ಹಾವು ಕಡಿತ ಪ್ರಕರಣಗಳ ನಮೂದಿಸುವುದು ಕಡ್ಡಾಯವಾಗಿರುತ್ತದೆ. IHIP ನಲ್ಲಿ ದಾಖಲಾಗಿರುವ ಹಾವು ಕಡಿತ ಪ್ರಕರಣಗಳ ಅಂಕಿ ಅಂಶಗಳ ಆಧಾರದ ಮೇಲೆ ಕಾರ್ಯಕ್ರಮ ರೂಪಿಸುವುದು ಯೋಜನೆಯ ಉದ್ದೇಶವಾಗಿದೆ. ಕರ್ನಾಟಕದಲ್ಲಿ ಹಾವು ಕಡಿತ ತಡಗಟ್ಟುವಿಕೆ ಹಾಗೂ ನಿಯಂತ್ರಣ (SBPC) ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ

ಮುಂದುವರೆದು ಭಾರತ ಸರ್ಕಾರವು ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣಾ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಕರ್ನಾಟಕ ರಾಜ್ಯಕ್ಕೆ 2023-24 ರಲ್ಲಿ ಸದರಿ ಕಾರ್ಯಕ್ರಮದ ತರಬೇತಿ ಮತ್ತು ಮೇಲ್ವಿಚಾರಣೆ ಹಾಗೂ ಸರ್ವೇಕ್ಷಣೆಗಾಗಿ ಅನುದಾನ ಬಿಡುಗಡೆಯಾಗಿರುತ್ತದೆ.

**ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಕಾರ್ಯ ಚಟುವಟಿಕೆಯನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಲು ಸೂಚಿಸಿದೆ.**

ಯಾವುದೇ ಹಾವು ಕಡಿತ ಪ್ರಕರಣಗಳು ಸರ್ಕಾರಿ ಆಸ್ಪತ್ರೆಗೆ ಬಂದಾಗ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಚಿಕಿತ್ಸೆ ನೀಡುವುದು. (QR ಕೋಡ್ ಲಿಂಕ್ ಅನ್ನು ಕೆಳಗೆ ನೀಡಲಾಗಿದೆ)

Scan for guidelines

2. ಹಾವು ಕಡಿತದ ನಿರ್ವಹಣೆ ಹಾಗೂ ಚಿಕಿತ್ಸೆಗೆ ASV (Anti Snake Venom) ಅವಶ್ಯಕತೆಯಿದ್ದು, ASV (Anti Snake Venom) ಅಗತ್ಯ ಔಷಧಗಳ ಪಟ್ಟಿಯಲ್ಲಿರುವುದರಿಂದ ನಿಯಂತ್ರಣ ಮತ್ತು ಮುಂಜಾಗ್ರತ ದೃಷ್ಟಿಯಿಂದ ಅಗತ್ಯ ದಾಸ್ತಾನನ್ನು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಇಡುವುದು ಮತ್ತು ನಿರ್ವಹಣೆ ಮಾಡುವುದು. ಆದ್ದರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ASVಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು.
3. ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ, ಆಡಳಿತ ವೈದ್ಯಾಧಿಕಾರಿಗಳು ಎಲ್ಲಾ ಹೊರ ರೋಗಿ, ಒಳ ರೋಗಿಯಾಗಿ ಚಿಕಿತ್ಸೆ ಪಡೆಯುವ ಮತ್ತು ಮರಣ ಹೊಂದಿದ ಹಾವು ಕಡಿತದ ಪ್ರಕರಣಗಳ ವಿವರಗಳನ್ನು IHIP P-Form ನಡಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
4. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಒಬ್ಬ ಕ್ಲಿನಿಕಲ್ ಚಿಕಿತ್ಸೆಗೆ ಸಂಬಂಧಪಟ್ಟ ನೋಡಲ್ ಅಧಿಕಾರಿಯನ್ನು ನೇಮಿಸುವುದು. ಜನರಲ್ ಆಸ್ಪತ್ರೆ ಮತ್ತು ಜಿಲ್ಲಾಸ್ಪತ್ರೆಗಳಲ್ಲಿ ಫಿಸಿಷಿಯನ್‌ರವರನ್ನು ನೇಮಿಸುವಾಗ ಫಸಿಷಿಯನ್‌ರಿಗೆ ಆದ್ಯತೆ ನೀಡುವುದು.
5. ಕರ್ನಾಟಕ ರಾಜ್ಯದಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಎಲ್ಲಾ ಸಂವಹನಗಳನ್ನು ಕೆಳಕಂಡ ಇ-ಮೇಲ್ ಗೆ ಕಳಿಸುವುದು- ಮೇಲ್ ವಿಳಾಸ-**sbpckarnataka@gmail.com**.
6. IHIP ತಂತ್ರಾಂಶದ ಕುರಿತು ಯಾವುದೇ ಸಂದೇಹವಿದ್ದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಪಿಡೆಮಿಯಾಲಜಿಸ್ಟ್ ರವರನ್ನು ಸಂಪರ್ಕಿಸುವುದು.

8.12.23

**(ರಂದೀಪ್ ಡಿ)**
**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ**
**ಕಲ್ಯಾಣ ಸೇವೆಗಳು**

ಸೂಕ್ತ ಕ್ರಮಕ್ಕಾಗಿ:-

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.
2. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು
3. ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು
4. ಸರ್ಕಾರಿ ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳು- ಜಿಲ್ಲಾ ಆಕುಕ ಅಧಿಕಾರಿಗಳ ಮುಖಾಂತರ

ಮಾಹಿತಿಗಾಗಿ:-

1. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು

2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು
3. ಯೋಜನಾ ನಿರ್ದೇಶಕರು - IDSP, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
4. ಸಹ ನಿರ್ದೇಶಕರು – CMD, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
5. ಉಪ ನಿರ್ದೇಶಕರು – SSU & CMD, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು
6. ಕಛೇರಿ ಪ್ರತಿ